ಓಎಸ್. 09/2018

ಡಿ. ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 13-01-2023

**ಪಾಟೀ ಸವಾಲು 11 ನೇ ಪ್ರತಿವಾದಿ ಪರ ಶ್ರೀ ಎನ್ ಇ ಹೆಚ್ . ವಕೀಲರಿಂದ,**

ದಾವಾ ಆಸ್ತಿಗಳು ನನ್ನ ತಂದೆ ಸೊಮಯ್ಯ ಮತ್ತು ನನ್ನ ಚಿಕ್ಕಪ್ಪ ದುರ್ಗಪ್ಪ ನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿಯವರ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳಲ್ಲಿ ಮೌಖಿಕವಾಗಿ ವಿಭಾಗವಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ತಮ್ಮ ಜೀವಿತ ಅವಧಿಯಲ್ಲಿ ಸ.ನಂ.680/2 ರ ಆಸ್ತಿ 00-36-00 ಗುಂಟೆ ಕ್ಷೇತ್ರವನ್ನು ನನ್ನ ಮಗ 2 ನೇ ಪ್ರತಿವಾದಿಗೆ ನೋಂದಾಯಿತ ದಾನಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಂದಾಯಿತ ದಾನಪತ್ರಕ್ಕೆ ಪ್ರತಿವಾದಿ 5 ರಿಂದ 10 ರವರು ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ.ದಾನಪತ್ರದ ದಿನದಿಂದ 2 ನೇ ಪ್ರತಿವಾದಿ ಸದರಿ ಆಸ್ತಿಯಲ್ಲಿ ಕಬ್ಜ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ.ಸದರಿ ದಾವಾಆಸ್ತಿ ಸ ನಂ 680/2 ರ 00-36-00 ಗುಂಟೆ ಪೈಕಿ 00-06-00 ಗುಂಟೆ ಆಸ್ತಿಯನ್ನು 11 ನೇ ಪ್ರತಿವಾದಿಗೆ ದಿಃ 02-04-2011 ಕ್ಕೆ ನೊಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂರದೆ ಸರಿ. ಸದರಿ ಕ್ರಯಪತ್ರದ ಪ್ರಕಾರ 11 ನೇ ಪ್ರತಿವಾದಿ ಹೆಸರು 06 ಗುಂಟೆ ಕ್ಷೆತ್ರಕ್ಕೆ ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಎಂದರೆ ಸರಿ. 11 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿ ಸ ನಂ 680/2 ಗ ಎಂದು ಪಹಣಿ ಷತ್ರಿಕೆಯಲ್ಲಿ ಹೆಸರು ದಾಖಲಿಸಲಾಗಿದೆ ಎಂದರೆ ಸರಿ. 11 ನೇ ಪ್ರತಿವಾದಿ ಕ್ರಯಪತ್ರದ ದಿನದಿಂದ ಈ ದಿನದವರೆಗೆ ಸದರಿ ಆಸ್ತಿಯಲ್ಲಿ ಕಬ್ಜ ವಹಿವಾಟಿನಲ್ಲಿದ್ದಾರೆ ಎಂದರೆ ಸರಿ. 11 ನೇ ಪ್ರತಿವಾದಿ ತಾನು ಪಡೆದ 06 ಗುಂಟೆ ಜಮೀನು ಪೈಕಿ 05 ಗುಂಟೆಯನ್ನು ಬಿನ್‌ಶತ್ಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 11 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿರುವುದರಿಂದ ನಮಗಾಗಿ ಮತ್ತು ನಮ್ಮ ಕುಟುಂಬದವರಿಗೆ ಯಾವುದೆ ಹಕ್ಕು ತಕರಾರು ಇರುವುದಿಲ್ಲ ಎಂದರೆ ಸರಿ.

(ವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.)

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.